# ಕೌಟುಂಬಿಕ ಪರಿಸರ ಮತ್ತು ಬೇಂದ್ರೆಯವರ ವ್ಯಕ್ತಿತ್ವ ವಿಕಸನ

## Koutimbika Parisara mattu Bendreyavara Vyaktitva Vikasana

**Dr.Bharathi TC, Associate Professor, Dept. of Kannada, Govt. First Grade College, Ayanur**

**ಡಾ.ಭಾರತಿ.ಟಿ.ಸಿ, ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಆಯನೂರು**

ವೈದಿಕ ಮನೆತನಕ್ಕೆ ಸೇರಿದ ಬೇಂದ್ರೆಯವರಿಗೆ ಕೌಟುಂಬಿಕ ಪರಿಸರದ ಧಾರ್ಮಿಕ ವಾತಾವರಣವು ಆಸ್ತಿಕ ಮನೋಧರ್ಮ ಮೂಡಿಸಲು ಕಾರಣವಾಯಿತು. 'ಬೇನ್‌ರೆ' ಮನೆತನ ಎಂದರೆ 'ಋಕ್' ಮಂತ್ರಗಳನ್ನು ಹೇಳುವ ಮನೆತನದವರೆಂದು ಅರ್ಥವಿತ್ತು. ವೇದ, ಉಪನಿಷತ್, ಧರ್ಮಶಾಸ್ತ್ರ, ಭಾಗವತ ಪುರಾಣಗಳ ಅಧ್ಯಯನವು ಬೇಂದ್ರೆಯವರಿಗೆ ಮನೆತನದ ಮೂಲಕ ಹರಿದು ಬಂದ ಜ್ಞಾನವಾಗಿತ್ತು. ಅವರಿಗೆ ತಮ್ಮ ಅಜ್ಜ-ಮುತ್ತಜ್ಜರುಗಳ ಧಾರ್ಮಿಕ ಬುದ್ಧಿ ಹಾಗೂ ಕಾವ್ಯಾಭ್ಯಾಸದ ಪರಿಚಯ ಇದ್ದಿತು. ಇದರಿಂದ ಸಾಹಿತ್ಯ ಮತ್ತು ಶಾಸ್ತ್ರಗಳ ರಚನಾ ಪ್ರತಿಭೆ ಬೇಂದ್ರೆಯವರ ಪೂರ್ವಿಕರಲ್ಲೂ ಇದ್ದಿತ್ತೆಂಬುದರ ಸೂಚನೆ ಕಂಡು ಬರುತ್ತದೆ.

ಬೇಂದ್ರೆಯವರ ಅಜ್ಜ ಶಿರಹಟ್ಟಿಯಲ್ಲಿದ್ದರು. ಅಪಾರ ವಿದ್ವತ್ತು ಮತ್ತು ಅಧ್ಯಾತ್ಮಿಕ ತೇಜಸ್ಸನ್ನು ಹೊಂದಿದ್ದ ಅವರು ಅನೇಕ ಗ್ರಂಥಗಳನ್ನು ರಚಿಸಿದ್ದರು. ಅವರು ರಚಿಸಿದ 'ಛಂದೋದಾಹರಣ' ಎಂಬ ಒಂದು ಛಂಧಶಾಸ್ತ್ರಕ್ಕೆ ಸಂಬಂಧಿಸಿದ ಪ್ರಬಂಧವನ್ನು ಬೇಂದ್ರೆಯವರೇ ಪ್ರಕಟಿಸಿದ್ದರು. ಬೇಂದ್ರೆಯವರು ತಮ್ಮ 'ಆತ್ಮ ಕಥನ'ದಲ್ಲಿ ಹೇಳಿಕೊಂಡ ಹಾಗೆ – "ನಮ್ಮ ಅಜ್ಜಂದಿರಾದ ಅಪ್ಪಾಭಟ್ಟರು ದಶಗ್ರಂಥಿಗಳೆಂದು, ಯಾಜ್ಞಿಕ ಧರ್ಮಶಾಸ್ತ್ರಗಳಲ್ಲಿ ಬಲ್ಲಿದರೆಂದು ಪ್ರಖ್ಯಾತರಾಗಿದ್ದರು. ನಮ್ಮ ಅಜ್ಜಂದಿರಿಂದ ರಚಿತವಾದ 'ಛಂದೋದಾಹರಣ' ಎಂಬ ಶಾಸ್ತ್ರೀಯ ಪ್ರಬಂಧವೊಂದನ್ನು ಇತ್ತೀಚೆಗೆ ನಾನು ಪ್ರಕಟಿಸಿದ್ದೇನೆ. ಅದರಲ್ಲಿ ಅವರ ಭಾಗವತ ಪುರಾಣ ಪ್ರೇಮವು, ಕವಿ ಮೇರೋಪಂತ ಪ್ರಭಾವವು ಕಂಡುಬರುತ್ತದೆ. ನಮ್ಮ ಚಿಕ್ಕಪ್ಪ ಬಂಡೋಪಂತ ಅವರು ಕಾವ್ಯಾಭ್ಯಾಸ ಮಾಡಿದ ಸಣ್ಣಪುಟ್ಟ ಬರವಣಿಗೆಗಳು ಹೇಗೋ ನನ್ನ ಹತ್ತಿರ ಉಳಿದುಕೊಂಡಿದೆ. ನಮ್ಮ ತಂದೆಯವರು ನಮ್ಮ ಅಜ್ಜಂದಿರ ಬಳಿ ಸಂಹಿತಾಂತ ಅಧ್ಯಯನ ಮಾಡಿದ್ದರು".[೧] ಎಂಬ ಮಾತುಗಳು ಬೇಂದ್ರೆಯವರಿಗೆ ಮನೆತನದ ಪರಂಪರೆಯ ಮೂಲಕ ದೊರೆತ ಧಾರ್ಮಿಕ ಮತ್ತು ಕಾವ್ಯಾತ್ಮಕ ಸಂಸ್ಕಾರವನ್ನು ಕುರಿತು ತಿಳಿಯಪಡಿಸುತ್ತವೆ. ಈ ಸಂಸ್ಕಾರವೇ ಬೇಂದ್ರೆಯವರು ವೈದಿಕ ಧರ್ಮ ಮತ್ತು ಸನಾತನ ಪರಂಪರೆಯ ಬಗ್ಗೆ ಶ್ರದ್ಧೆ ಹೊಂದಲು ಕಾರಣವಾಯಿತು. ಅವರ ಕಾವ್ಯ ಪರಿಶ್ರಮಕ್ಕೆ ದೊರೆತ ಕೌಟುಂಬಿಕ ಪರಂಪರೆಯ ಜೀವ ಪೋಷಣವು ಬೇಂದ್ರೆಯವರಿಗೆ, ತಮ್ಮ ಮನೆತನದ ಬಗ್ಗೆ ಗೌರವ, ಮತ್ತು ಆದರ್ಶಮಯ ಜವಾಬ್ದಾರಿಯುತ ಜೀವನಕ್ಕೆ ಕಾರಣವಾಯಿತು.

ಬೇಂದ್ರೆಯವರಿಗೆ ಪ್ರಭಾವ ಮತ್ತು ಪ್ರೇರಣೆಗೆ ಒಳಗಾಗುವಷ್ಟು ತಂದೆಯ ಸಾನಿಧ್ಯ ಲಭಿಸಲಿಲ್ಲ. ಬೇಂದ್ರೆಯವರ ತಂದೆಯವರು ಮರಣ ಹೊಂದಿದಾಗ (೧೯೦೭) ಅವರಿಗೆ ಕೇವಲ ಹನ್ನೊಂದು ವರ್ಷ. ತುಂಟತನ ಮತ್ತು ಬಾಲ್ಯದ ಆಟಗಳಲ್ಲಿ ಮುಳುಗಿದ್ದ ಬೇಂದ್ರೆಯವರಿಗೆ ತಂದೆಯ ನೆನಪೇ ಇಲ್ಲ. ತಾಯಿ-ಅಜ್ಜಿಯರ ಮೂಲಕವೇ ಅವರ ಪರಿಚಯ. ಬೇಂದ್ರೆಯವರ ತಂದೆಯವರೂ ವೇದ ಪಾಠಗಳನ್ನು ಬಲ್ಲವರಾಗಿದ್ದರು. ಪೌರೋಹಿತ್ಯ ನಿಪುಣರೂ, ಆದರ್ಶ ಶಿಕ್ಷಕರೂ ಆಗಿದ್ದು, ಚಿಕ್ಕ ಪ್ರಾಯದಲ್ಲಿಯೇ ಗಂಡ ಮಾಲೆಯ ರೋಗದಿಂದ ನರಳಿ ಮರಣ ಹೊಂದಿದ್ದರು. ಗೋಂದವಲೇಕರ ಮಹಾರಾಜರಿಂದ ನಾಮೋಪದೇಶವನ್ನು ಪಡೆದು, ಅದನ್ನು ಪತ್ನಿಗೆ ಅವರೇ ನೀಡಿದ್ದರು. ಇದನ್ನು ಅವರು ತಮ್ಮ ಜೀವನದ ಬೆಳಕೆಂದು ಭಾವಿಸಿದ್ದರು. ಬೇಂದ್ರೆಯವರು ತಮ್ಮ ಬಾಲ್ಯದಿಂದಲೂ ಅಜ್ಜಿ ಮತ್ತು ತಾಯಿಯವರಿಂದ ಸದಾ ಕೇಳುತ್ತಿದ್ದ ತಂದೆಯವರ ಬಗೆಗಿನ ವರ್ಣನೆ, ವಿವರಣೆಯನ್ನು ಆಧರಿಸಿ, "ಸಾವಿನೊಂದಿಗೆ ಸರಸ" ಎಂಬ ಹರಟೆಯನ್ನು ಬರೆದರು. ಬೇಂದ್ರೆಯವರ ತಂದೆ ರಾಮಚಂದ್ರರು ತಮ್ಮ ಎರಡನೆಯ ಪತ್ನಿಯಾದ ಅಂಬಿಕೆಗೆ ಉಪದೇಶಿಸಿದ, ಗೋಂದವಲೇಕರ ಮಹಾರಾಜರ ನಾಮೋಪದೇಶ ಮತ್ತು ರಾಮಮಂತ್ರದ ಪ್ರಭಾವದಿಂದ ನೈತಿಕ ಬೆಂಬಲವನ್ನು ಪಡೆದ ತಾಯಿ ಅಂಬಿಕೆ, ಬಡತನ ಮತ್ತು ಸಂಕಷ್ಟದ ಬದುಕನ್ನು ಧೈರ್ಯದಿಂದ ಎದುರಿಸಿದರು. ತಂದೆಯ ಅಸ್ಪಷ್ಟ ಕಲ್ಪನೆಯೊಂದೇ ಬೇಂದ್ರೆಯವರಿಗೆ ಪಿತೃವಾತ್ಸಲ್ಯದ ನೆರಳಾಯಿತು. ತಾಯಿ ಅಜ್ಜಿಯರ ಮಾತುಗಳಿಂದ ಗ್ರಹಿಸಿದ ತಂದೆಯ ಅನಾರೋಗ್ಯದ ಬಗ್ಗೆ ಬೇಂದ್ರೆಯವರಿಗೆ ಅಪಾರವಾದ ಮರುಕವಿತ್ತು.

"ಓ ಪಾಪ ನಿಷ್ಪಾಪ, ಅವರ ಜೀವನ ತಾಪ,
ಅವರೆ ಬಲ್ಲರು, ಯಾರು ಬಲ್ಲವರು
ಗಂಡ ಮಾಲೆಯ ಧರಿಸಿ, ರುಂಡ ಮಾಲೆಯ ಹಾಗೆ
ಮಸಣದಿ ಉಸುರಾಡಿ ನಿಂತವರು"
("ತಂದೆ ರಾಮಚಂದ್ರ ತಾತಂಭಟ್ಟ" – ಕವನ).

ಎಂದು ತಮ್ಮ ಅಂತಃಕರಣದ ಪ್ರೀತಿಯನ್ನು ತಂದೆಯವರಿಗೆ ಸಲ್ಲಿಸುತ್ತಾರೆ. ಹೀಗೆ ಬೇಂದ್ರೆ ಅವರಿಗೆ ತಂದೆ ಒಂದು ನೆನಪಾಗಿ ಕವನದಲ್ಲಿ ಅರಳಿದರೇ ಹೊರತು, ಅವರನ್ನು ವ್ಯಾಪಿಸುವಷ್ಟು ಪ್ರಭಾವವನ್ನು ಬೀರಲಿಲ್ಲ. ಆದರೆ ತಾಯಿ ಅಂಬಿಕೆಯ ವಾತ್ಸಲ್ಯ, ವ್ಯಕ್ತಿತ್ವ, ಆಸರೆ ಅವರ ಮನಮಸ್ತಿಷ್ಕಗಳ ಕಣ ಕಣವನ್ನು ವ್ಯಾಪಿಸಿಕೊಂಡಿತು. ಅಂಬಿಕೆ ಅವರ ಬದುಕಿನ ಮತ್ತು ಕಾವ್ಯದ ಕಣ್ಣಾದರು.

'ಬೇಂದ್ರೆಯವರ ಬಾಲ್ಯ ಸ್ತ್ರೀ-ಪೋಷಿತವಾದುದು' ಎಂಬ ಅಭಿಪ್ರಾಯವನ್ನು ಎಲ್ಲರೂ ಒಪ್ಪುತ್ತಾರೆ. ಅಜ್ಜಿ ಗೋದೂಬಾಯಿ ಮಗಳ ಸಂಸಾರಕ್ಕಾಗಿ ಜೀವ ತೇದವಳು. "ಆಕೆಯ ಜೀವನದ ಕಷ್ಟದ ಕಥೆಗಳನ್ನು ನೆನೆದಂತೆಲ್ಲಾ ಆಕೆ ಮಹಾ ತಪಸ್ವಿನಿ ಎಂದೇ ಭಾಸವಾಗುವುದು"[೨] ಎಂದು ಬೇಂದ್ರೆಯವರು ಅಭಿಪ್ರಾಯ ಪಡುತ್ತಾರೆ. "ಅವಳದು ಸ್ತ್ರೀ ರೂಪದ ಪುರುಷ ವ್ಯಕ್ತಿತ್ವ. ಧೈರ್ಯ ಮತ್ತು ಆತ್ಮಸ್ಥೈರ್ಯದಿಂದ ಬದುಕಿನ ಸವಾಲುಗಳನ್ನು ಎದುರಿಸಿದವಳು" ಎಂದು ಆಕೆಯ ವ್ಯಕ್ತಿತ್ವವನ್ನು ವಿವರಿಸುತ್ತಾರೆ. "ಆಳಾಗಿ ದುಡಿದರು, ಅರಸಾಗಿ ಉಂಡಳು, ಬಂದ ಭೋಗಕ್ಕೆಲ್ಲಾ ತಾಳಿದವಳು" ಎಂದು ತಮ್ಮ ಕಾವ್ಯದ ಮೂಲಕ ಅವಳ ವ್ಯಕ್ತಿತ್ವಕ್ಕೆ ಭಾಷ್ಯವನ್ನು ಬರೆಯುತ್ತಾರೆ. ಬೇಂದ್ರೆಯವರಿಗೆ ಧೈರ್ಯ, ಸ್ಥೈರ್ಯ, ಬದುಕಿನ ಕಷ್ಟಗಳನ್ನು, ಬಡತನವನ್ನು ಎದುರಿಸುವ ಛಲ, ದೈವಭಕ್ತಿ, ಸಾತ್ವಿಕತೆ, ಕರುಳ ಸಾವಿನ ದುಃಖವನ್ನು ತಾಳುವ ಗಟ್ಟಿತನ ಎಲ್ಲವೂ ಅಜ್ಜಿ ಗೋದೂಬಾಯಿಯ ವ್ಯಕ್ತಿತ್ವದ ಪ್ರಭಾವದಿಂದ ದಕ್ಕಿದವು. ಆಕೆಯ

ಸಂಕಷ್ಟಮಯ ಬದುಕನ್ನೂ, ಹೋರಾಟವನ್ನೂ ಕಣ್ಣಾರೆ ಕಂಡ ಬೇಂದ್ರೆಯವರಿಗೆ, ಆಕೆಯೊಂದು ಮಹಾಸತ್ತ್ವವಾಗಿ ತಮ್ಮೊಳಗೆ ಆವಿರ್ಭಸಿದಂತೆನಿಸಿತ್ತು. “ನಮ್ಮ ಅಜ್ಜಿ ಹುಲಿಯಂತಹವಳು. ಆಕೆಗೆ ಆಳವಾದ ಮಮತೆಯ ಹೃದಯ ಇತ್ತು. ವೈದಿಕ ಕುಟುಂಬದಲ್ಲಿ ತನ್ನ ಮಗಳನ್ನು ಕೊಟ್ಟದ್ದೇ ದೊಡ್ಡ ಪುಣ್ಯವೆಂದೂ, ಅವಳ ಮಕ್ಕಳ ಸಂಗೋಪನ ಮಾಡುವುದು ಇನ್ನೂ ಹೆಚ್ಚಿನ ಪುಣ್ಯವೆಂದೂ ಆಕೆ ತಿಳಿದಿದ್ದಳು” [೩] ಎಂದು ಬೇಂದ್ರೆಯವರು ಅಭಿಪ್ರಾಯ ಪಡುತ್ತಾರೆ. ಆದ್ದರಿಂದಲೇ ಗೋದೂಬಾಯಿಗೆ ಬೇಂದ್ರೆಯವರ ಪಾಲನೆ ಪೋಷಣೆಯು ಬದುಕಿನ ತಪಸ್ಸಾಯಿತು.

ಶ್ರೀಧರ ಖಾನೋಳಕರ ಬೇಂದ್ರೆಯವರ ಬಾಲ್ಯದ ಗೆಳೆಯರು. ಅವರು ಒಂದು ವಿವರಣೆಯ ಮೂಲಕ ಗೋದೂಬಾಯಿಯ ಸ್ವಭಾವದ ಮತ್ತು ಆಕೆಯ ಮಾತೃಹೃದಯದ ಪರಿಚಯವನ್ನು ಮಾಡಿಕೊಡುತ್ತಾರೆ. “ಇವರ (ಬೇಂದ್ರೆಯವರ) ತಾಯಿಯ ತಾಯಿ ಒಂದು ಖಾನಾವಳ ಹಾಕಿದ್ದರು. ಆಗಿನ ಖಾನಾವಳ ಎಂದರೆ ಅದೊಂದು ಸುಂದರವಾದ ಊಟದ ಮನೆ. ದೊಡ್ಡ ಆಫೀಸರರು ಬಿ.ಎ., ಎಂ.ಎ. ಆದಂತಹ ಶಾಲಾ ಮಾಸ್ತರರು, ಕೆಲವು ವಿದ್ಯಾರ್ಥಿಗಳು ಹೀಗೆ ಊಟ ಮಾಡುವರು. ಹೆಸರಿಗೆ ಒಂದು ಖಾನಾವಳ. ಅದು ಒಂದು ಮನೆಯಂತೆಯೇ ಇತ್ತು. ಯಾರಾದರೂ ಬೇನೆ ಬಿದ್ದರೆ, ಇವರ ಅಜ್ಜಿಯೇ ಉಪಚರಿಸುತ್ತಿದ್ದಳು. ಖಾನಾವಳಿಯಲ್ಲಿ ಊಟ ಮಾಡುವವರೆಲ್ಲರೂ ಇವರಿಗೆ ಮೊಮ್ಮಕ್ಕಳೇ ಅನ್ನಿರಿ! ಅಷ್ಟು ಪ್ರೀತಿಸುತ್ತಿದ್ದಳು”[೪]– ಎಂದು ವಿವರಿಸುತ್ತಾರೆ. ಗೋದೂಬಾಯಿಗೆ ಬದುಕು ಒಂದು ಬವಣೆಯಾಗದೇ ‘ಕರ್ಮಭೂಮಿ’ಯಾಗಿತ್ತು. ಅತ್ಯಂತ ಸ್ವಾಭಿಮಾನಿಯಾದ ಆಕೆಯ ಶಿಸ್ತು, ಕಷ್ಟ ಸಹಿಷ್ಣುತೆ, ಕರ್ತವ್ಯ ನಿಷ್ಠೆ, ಆಧ್ಯಾತ್ಮಿಕತೆ, ಬದುಕಿನ ಶ್ರದ್ಧೆ, ಮನವೀಯ ಮನಸ್ಸು ಇವೆಲ್ಲಕ್ಕೂ ಬೇಂದ್ರೆಯವರು ಸಾಕ್ಷಿಯಾಗಿದ್ದರು. ಅವರ ವ್ಯಕ್ತಿತ್ವದ ಮೇಲೆ ಅಜ್ಜಿಯ ಪ್ರಭಾವ ಅತ್ಯಂತ ದಟ್ಟವಾಗಿತ್ತು. ಬೇಂದ್ರೆಯವರ ವ್ಯಕ್ತಿತ್ವದಲ್ಲಿ ಮತ್ತು ಬದುಕಿನಲ್ಲಿ ಈ ಎಲ್ಲಾ ಗುಣಸ್ವಭಾವಗಳ ಪಡಿಯಚ್ಚನ್ನು ನಾವು ಕಾಣಬಹುದಾಗಿದೆ. ಜೊತೆಗೆ ಆ ಖಾನಾವಳಿಯಲ್ಲಿ ನಡೆಯುತ್ತಿದ್ದ ಕಾಲೇಜು ಅಧ್ಯಾಪಕರ, ಶಾಲಾ ಶಿಕ್ಷಕರ, ಸಾಹಿತಿಗಳ ನಡುವಿನ ವೈಚಾರಿಕ ಚರ್ಚೆಗಳೂ ಬೇಂದ್ರೆಯವರ ಮನಸ್ಸು ಮತ್ತು ವ್ಯಕ್ತಿತ್ವದ ಮೇಲೆ ಪರಿಣಾಮಕಾರಿಯಾದ ಪ್ರಭಾವವನ್ನು ಬೀರಿದ್ದುವು.

“ಹದಿನೇಳು ಹಡೆದರು ಹೆಣ್ಣೊಂದೆ ಉಳಿದರು
ಜಗ್ಗದ ಕುಗ್ಗದ ಎದೆಯುವಳು”
(ಅಜ್ಜಿ ಗೋದೂಬಾಯಿ ಕವನ).

ಮುಪ್ಪಿನಲ್ಲೂ ಬದುಕಿನಲ್ಲಿ ಅಪಾರ ಶ್ರದ್ಧೆ, ಶಿಸ್ತು, ಕರ್ತವ್ಯ ಬದ್ಧತೆಯಿಂದ ಬಾಳಿ, ಹೃದಯದ ಕಪ್ಪೆ ಚಿಪ್ಪಿನಲ್ಲಿ (ಸಿಂಪಿ) ಮಗಳು ಮತ್ತು ಮೊಮ್ಮಗನನ್ನು ಕಾಪಾಡಿಕೊಂಡವಳು. ಮರಣ ಹೊಂದಿದ ತನ್ನ ಮಗನನ್ನು ಮೊಮ್ಮಗನಲ್ಲಿ ಕಂಡು, ಪ್ರೀತಿಯ ಧಾರೆಯನ್ನೇ ಹರಿಸಿದಳು. ಅಜ್ಜಿಯ ಧೈರ್ಯ, ಶ್ರದ್ಧೆ ಮತ್ತು ಆಕೆಯಲ್ಲಿದ್ದ ಸದ್ಗುರುನಾಥನ ವಿಶ್ವಾಸವನ್ನು ಸ್ಮರಿಸುತ್ತಾ, “ಅಜ್ಜಿ: ಗೋದೂಬಾಯಿ” ಎಂಬ ಕವನವನ್ನು ಬರೆದು, ಬೇಂದ್ರೆಯವರು ತಮ್ಮ ನುಡಿ ತರ್ಪಣವನ್ನು ಅರ್ಪಿಸುತ್ತಾರೆ. ಬೇಂದ್ರೆಯವರಿಗೆ ಅಜ್ಜಿಯ ಎಲ್ಲ ಗುಣಗಳೂ ಎರಕ ಹೊಯ್ಯಲ್ಪಟ್ಟು, ಅವರ ವ್ಯಕ್ತಿತ್ವ ಪುಟವಿಟ್ಟ ಚಿನ್ನದ ಮೆರುಗನ್ನು ಪಡೆಯಿತು.

ಬೇಂದ್ರೆಯವರು ತಮ್ಮ ಅಜ್ಜಿಯ ಸ್ವಾಭಿಮಾನದ ಬದುಕನ್ನು ಕುರಿತು ಹೆಮ್ಮೆಯಿಂದ ಈ ರೀತಿ ಹೇಳಿಕೊಳ್ಳುತ್ತಾರೆ. “ಅಜ್ಜಿಯ ಪೋಷಣೆಯಲ್ಲಿ ಬೆಳೆದವನಾದರು, ನಾನು ನಿಜವಾದ ಬಡತನವನ್ನನುಭವಿಸಲಿಲ್ಲ. ನನ್ನ ಅಜ್ಜಿ ಬಡವಿ. ಜನರ ಮನೆಯಲ್ಲಿ ಅಡಿಗೆಗೆ ಹೋಗುತ್ತಿದ್ದರೂ, ಕಟ್ಟಾಭಿಮಾನಿ, ಯಾರಿಗೂ ‘ದೇಹೀ’ ಎಂದವಳಲ್ಲ.ನಮ್ಮದೂ ಅದೇ ಹಾದಿ”[೫] ಎಂದು ತಮ್ಮ ಆತ್ಮಾಭಿಮಾನವನ್ನು ರೂಪಿಸಿದ ಅಜ್ಜಿಯ ಬಗ್ಗೆ ಮನತುಂಬಿ ಆಡುತ್ತಾರೆ. ಹೀಗೆ ಬೇಂದ್ರೆಯವರನ್ನು ಅಪಾರವಾದ ಪ್ರೀತಿ ವಾತ್ಸಲ್ಯದಿಂದ ಸಾಕಿ, ಮಾತೃತ್ವದ ಸವಿಯನ್ನುಣ್ಣಿಸಿದ ಅಜ್ಜಿ ಗೋದೂಬಾಯಿಯವರು, ಬೇಂದ್ರೆಯವರ ವ್ಯಕ್ತಿತ್ವ ನಿರ್ಮಾಣದಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತಾರೆ. ಬೇಂದ್ರೆಯವರಲ್ಲಿ ‘ಮಾತೃತತ್ತ್ವ’ದ ಅರಿವುಂಟಾಗಲು ಇವರ ಪ್ರೀತಿಯೂ ಕಾರಣವಾಯಿತು.

ಬೇಂದ್ರೆಯವರ ವ್ಯಕ್ತಿತ್ವವನ್ನು ಪರಿಪೂರ್ಣವಾಗಿ ರೂಪಿಸಿದ ಮತ್ತೊಂದು ದಿವ್ಯಚೇತನ ಎಂದರೆ ಅವರ ತಾಯಿ ಅಂಬಿಕೆ. ಬೇಂದ್ರೆಯವರು ತಾಯಿ ಅಂಬಿಕೆಗೆ ಸರ್ವಸ್ವ. ತಾಯಿ ಅಂಬಿಕೆಯು ಬೇಂದ್ರೆಯವರ ಸರ್ವಸ್ವ–ಎಂಬ ನೆಲೆಯಲ್ಲಿನ ಸಂಬಂಧ ಅವರದು. ಬಾಲ್ಯದಲ್ಲಿ ತಂದೆಯ ಪ್ರೀತಿಯಿಂದ ವಂಚಿತರಾದ ಬೇಂದ್ರೆಯವರಿಗೆ ತಾಯಿ ಅಂಬಿಕೆಯೇ ಸರ್ವಾವಲಂಬನ. ಚಿಕ್ಕ ವಯಸ್ಸಿನಲ್ಲಿಯೇ ಪತಿಯನ್ನು ಕಳೆದುಕೊಂಡು ವಿಧವೆಯಾದ ಅಂಬಿಕೆಗೆ ಮಕ್ಕಳೇ ಬದುಕಿನ ಅರ್ಥ, ಉದ್ದೇಶ, ಗುರಿ ಎಲ್ಲವೂ ಆಗಿದ್ದರು.

“ಬೇಂದ್ರೆಯವರ ತಾಯಿ ರಾಮನಾಮೋಪಾಸಕಳು. ಗೋಂದಾವಲೇಕರ ಮಹಾರಾಜರ ಭಕ್ತೆ. ಆಕೆ ಮತ್ತು ಆಕೆಯ ಪತಿ ರಾಮಚಂದ್ರ ಬೇಂದ್ರೆಯವರು ಗೋಂದಾವಲಿಗೆ ಹೋಗಿ, ಮಹಾರಾಜರ ದರ್ಶನ ಪಡೆದು ರಾಮನಾಮೋಪಾಸನೆಯನ್ನು ಆರಂಭಿಸಿದರು. ಆ ನಂತರವೇ ಅವರಿಗೆ ಚೊಚ್ಚಿಲ ಮಗನಾದ ದತ್ತಾತ್ರೇಯ ಬೇಂದ್ರೆ ಹುಟ್ಟಿದ್ದು”.[೬] ಗೋಂದಾವಲೆ ಮಹಾರಾಜರ ಕೃಪೆಯಿಂದಲೇ ಬೇಂದ್ರೆಯವರು ಹುಟ್ಟಿದ್ದೆಂದು ಅಚಲವಾಗಿ ನಂಬಿದ ಮಹಾ ದೈವಭಕ್ತೆ. ಬದುಕಿನ ಬಡತನ ಮತ್ತು ಸಂಕಷ್ಟಗಳನ್ನು ದಿಟ್ಟವಾಗಿ ಎದುರಿಸಿದ ಮಹಾತಾಯಿ. ಬೇಂದ್ರೆಯವರು ತಮ್ಮ ತಾಯಿಯ ಬಗ್ಗೆ.

“ಆ ತಾಯಿ ಮಾತಾಯಿ ಈ ಬಾಯ ತುತ್ತಲ್ಲ
ಅವಳನ್ನು ಸ್ತುತಿಸಲು ಎದೆ ಸಾಲದು”.
(ತಾಯಿ, ಪಾರ್ವತಿ.ಅಂಬಿಕೆ – ಕವನ)

ಎಂದು ಸ್ತುತಿಸುತ್ತಾರೆ. ಬೇಂದ್ರೆಯವರಲ್ಲಿ ಆಸ್ತಿಕತೆ ಮತ್ತು ಕಾವ್ಯಚಿಂತನೆ ಎರಡೂ ಕೂಡ ಅವರ ತಾಯಿಯ ಪ್ರೇರಣೆಯ ಶಕ್ತಿಯಿಂದಲೇ ಬೆಳೆದವು. ಬೇಂದ್ರೆಯವರಿಗೆ ತಾಯಿಯೊಂದಿಗೆ ಅವಿನಾಭಾವವಾದ ವಾತ್ಸಲ್ಯದ ಸೆಳೆತ. ತಾಯಿ ಅಂಬಿಕೆಯ ಕಣ್ಣಿನಿಂದಲೇ ಬದುಕನ್ನು ನೋಡಿದ ಅಂಬಿಕಾತನಯದತ್ತರಿಗೆ ಮಾತೃಪ್ರೇಮ ಕಲ್ಪನೆಯೇ ಕಾವ್ಯದ ಮೂಲ ನೆಲೆಯಾಯಿತು. ಬೇಂದ್ರೆಯವರ ವ್ಯಕ್ತಿತ್ವದ ಮೇಲಾದ ಅವರ ತಾಯಿಯ ಪ್ರಭಾವ ವೈವಿಧ್ಯತೆ ಮತ್ತು ವೈಶಿಷ್ಟ್ಯತೆಗಳಿಂದ ಕೂಡಿತ್ತು. ಅದನ್ನು ಬೇಂದ್ರೆಯವರು ಈ ರೀತಿಯಾಗಿ ವಿವರಿಸುತ್ತಾರೆ. “ನಮ್ಮ ತಾಯಿ ಮನೆಯಲ್ಲಿರುವಾಗ ಅನೇಕ ಪ್ರಾಕೃತ ಓವಿ ಗ್ರಂಥಗಳನ್ನು ತಾನು ಓದಿದಳು, ನನ್ನಿಂದ ಓದಿಸಿದಳು. ಕಾಶಿಖಂಡ, ಜೈಮಿನಿಭಾರತ, ಏಕನಾಥ ಭಾಗವತ, ದಾಸಬೋಧೆ ಇವುಗಳ ಶ್ರವಣವೂ ಆ ಕಾಲದಲ್ಲಿಯೇ ಆಯಿತು. ಊರಲ್ಲಿಯ ಪುರಾಣ, ಪ್ರವಚನ, ಕೀರ್ತನೆಗಳು ಅವು ಬೇರೆ. ಸಹಸ್ರ ಬುದ್ಧೆ ಅವರ ಸಂಸ್ಕೃತ ಪಾಠ ಶಾಲೆಯೊಳಗಿನ ವಿದ್ಯಾಭ್ಯಾಸ, ಮೇಘದೂತ, ಭರ್ತೃಹರಿ ಶತಕ, ಕಾಳಿದಾಸನ ನಾಟಕ ಇವುಗಳ ಸಂಸ್ಕಾರ ಮೂಡಿತು. ಜಗನ್ನಾಥ ಪಂಡಿತನ ಕೃತಿಗಳು ನನ್ನ ಪ್ರೀತಿಯ

ಪಠನ ಪುಸ್ತಕಗಳಾಗಿದ್ದವು. ಅದರೊಳಗಿನ ಅನ್ಯೋಕ್ತಿ, ಶಾಂತಿ ವಿಲಾಸಗಳಂತೆಯೇ ಅವನ ಗಂಗಾಲಹರಿ ಮತ್ತು ಬೇರೆ ಲಹರಿಗಳು, ನನ್ನನ್ನು ತಿಳಿಯದೇ ಕಾವ್ಯಪ್ರದೇಶದಲ್ಲಿ ಎಳೆದೊಯ್ದವು"[೭] ಎಂದು ಹೇಳುತ್ತಾರೆ.

ಹೀಗೆ ಬೇಂದ್ರೆಯವರ ವ್ಯಕ್ತಿತ್ವ ತಾಯಿ ಅಂಬಿಕೆಯ ವಾತ್ಸಲ್ಯದ ದಿವ್ಯ ಸಾನಿಧ್ಯದಲ್ಲಿ ರೂಪುಗೊಂಡಿತು. ತಾಯಿಯ ಮಮತೆಯ ಮಗನಾದ ಬೇಂದ್ರೆಯವರಿಗೆ – "ತಾಯಿಯೆಂದರೆ ಬಹುಭಕ್ತಿ; ತಾಯಿಯೆಂದರೆ ದೇವಿ ಅವರ ಪಾಲಿಗೆ"[೮] ಬೇಂದ್ರೆಯವರ ವ್ಯಕ್ತಿತ್ವ ನಿರ್ಮಾಣದಲ್ಲಿ ಅವರ ತಾಯಿ ಅಂಬಿಕೆಯ ಪಾತ್ರ ಎಷ್ಟು ಮಹತ್ವಪೂರ್ಣವಾದದ್ದೆಂದರೆ, ಅವರ ಸಂಪೂರ್ಣ ಕಾವ್ಯದಲ್ಲಿ ಮಾತೃಶಕ್ತಿಯೇ ಸ್ಥಾಯಿಭಾವವಾಯಿತು. "ಬೇಂದ್ರೆಯವರ ವ್ಯಕ್ತಿತ್ವ ರೂಪುಗೊಳ್ಳುವುದಕ್ಕೆ ಅವರ ಮನೆತನ, ಸುತ್ತಮುತ್ತಲಿನ ಪರಿಸರ, ವಿಶ್ವವಿದ್ಯಾನಿಲಯದ ಶಿಕ್ಷಣ ಇವುಗಳ ಹೊಣೆ ನಾಲ್ಕರಲ್ಲೊಂದು ಪಾಲಾದರೆ, ಉಳಿದ ಮೂರು ಪಾಲಿನ ಹೊಣೆ ತಾಯಿಯದು".[೯] ಎಂಬ ಮಾತು ಅತ್ಯಂತ ಅರ್ಥಪೂರ್ಣ ಮತ್ತು ಮಹತ್ವದ್ದೆನಿಸುತ್ತದೆ. ಅಂಬಿಕಾತನಯದತ್ತರನ್ನು ರೂಪಿಸುವಲ್ಲಿ ತಾಯಿ ಅಂಬಿಕೆಯ ಪ್ರಭಾವ ಅತ್ಯಂತ ದಟ್ಟವಾದುದು.

ಬೇಂದ್ರೆಯವರು ತಮ್ಮಲ್ಲಿನ ಶೃತಿಜ್ಞಾನವೂ ತಾಯಿಯ ಬಳುವಳಿ ಎಂದು ಹೇಳಿಕೊಳ್ಳುತ್ತಾರೆ. ಅವರ ಅಜ್ಜಿ ಮತ್ತು ತಾಯಿ ಹಾಡುವ ಹಾಡು, ಭಜನೆ ಇತ್ಯಾದಿಗಳಿಂದ ಅವರಿಗೆ ಶೃತಿ ಸಂಸ್ಕಾರ ಸಿಕ್ಕಿತ್ತು. "ಬೇಂದ್ರೆಯವರದು ಮೂಲತಃ ಜಾನಪದ ಪ್ರತಿಭೆ; ಅವರ ಕಾವ್ಯದಲ್ಲಿ ಗೇಯತೆಯ ಗುಣ ಪ್ರಮುಖವಾದುದು"[೧೦] ಈ ಮಾತು ಬೇಂದ್ರೆಯವರ ಕಾವ್ಯಕ್ಕೆ ಅವರ ಶೃತಿ ಸಂಸ್ಕಾರ ಎಷ್ಟರಮಟ್ಟಿಗೆ ಸಹಾಯಕವಾಯಿತೆಂದು ತಿಳಿದು ಬರುತ್ತದೆ. "ಜನರನ್ನು ಮುಗ್ಧಗೊಳಿಸುವ ಕಂಠಸಂಪತ್ತು ಬಹುಶಃ ನನಗೆ ತನ್ನ ತಾಯಿಯಿಂದ ಬಳುವಳಿಯಾಗಿರಬೇಕು. ಚಿಕ್ಕಂದಿನಲ್ಲೇ ನಾನು ಲಗ್ನದ ಮನೆಯಲ್ಲಿ ಮರಾಠಿ ಹಾಡುಗಳನ್ನು ಅನ್ನ ತೊಡಗಿದರೆ, ಸಭೆ ಮುಗ್ಧವಾಗಿ ಕೇಳುತ್ತಿತ್ತು".[೧೧] ಎಂದು ಬೇಂದ್ರೆಯವರು ತಮ್ಮ ಕಂಠ ಸಂಪತ್ತು ಮತ್ತು ಶೃತಿಜ್ಞಾನವನ್ನು ಕುರಿತಂತೆ ಹೇಳಿಕೊಳ್ಳುತ್ತಾರೆ. ತಾಯಿಯಿಂದ ಬಳುವಳಿಯಾಗಿ ಪಡೆದ ಈ ಶೃತಿ ಜ್ಞಾನವನ್ನು ಬೇಂದ್ರೆ ತಮ್ಮ ಕಾವ್ಯ ರಚನೆಯಲ್ಲಿ ಅತ್ಯುತ್ತಮವಾಗಿ ಬೆಳೆಸಿಕೊಂಡು, 'ನಾದಕವಿ' ಎಂದು ಕರೆಸಿಕೊಂಡರು. ಕಾವ್ಯ ರಚನೆಯಲ್ಲಿ ಶೃತಿಜ್ಞಾನವು ಒಬ್ಬ ಕವಿಗೆ ಎಷ್ಟು ಮಹತ್ವದ್ದೆಂಬುದಕ್ಕೆ ನಮ್ಮನ್ನು ಮೋಡಿ ಮಾಡಿರುವ ಬೇಂದ್ರೆಯವರ ಸಾಕಷ್ಟು ಪದ್ಯಗಳು ಉದಾಹರಣೆಯಾಗಿವೆ. ಬೇಂದ್ರೆ ತಮ್ಮ ಕವನಗಳನ್ನು ವಾಚಿಸುತ್ತಿದ್ದ ರೀತಿಯೂ ಅತ್ಯಂತ ಪ್ರಸಿದ್ಧವಾದುದು. ಇಡೀ ಸಭೆಯನ್ನು ಸಮ್ಮೋಹನಗೊಳಿಸುವ ಅವರ ಕಾವ್ಯವಾಚನ ಕೇಳುಗರನ್ನು ಯಾವುದೋ ಲೋಕಕ್ಕೆ ಕರೆದೊಯ್ದುಬಿಡುತ್ತಿತ್ತು. ಬೆಳಗಾವಿ, ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಅವರು ವಾಚಿಸಿದ "ಹಕ್ಕಿ ಹಾರುತಿದೆ ನೋಡಿದಿರಾ" ಕವನ ಸಭಿಕರೆಲ್ಲರೂ ಆಕಾಶವನ್ನು ನೋಡುವಂತೆ ಮಾಡಿದ್ದು ಐತಿಹಾಸಿಕ ಸತ್ಯವಾಗಿದೆ.

ಬೇಂದ್ರೆಯವರು "ಅಂಬಿಕೆಯ ತೊಡೆ, ಹೊಟ್ಟೆ, ಎದೆ, ಕೊರಳು, ತುಟಿ, ಕಣ್ಣು ಒಂದೊಂದರಲ್ಲಿಯೂ ಆ ಮಹಾ ಸ್ಪರ್ಶವಿತ್ತು. ಆದರೆ ಆಕೆಯ ದೀಕ್ಷೆಯಲ್ಲಿ ಅನಂತ ಸಹನೆಯಿತ್ತು. ಯುಗಯುಗದ ನೋಂಪಿಯ ಕಂಪಿತ್ತು. ತಂದೆಯ, ಅವನ ಬಳಗದ ನಿಕಟ ಸಾನಿಧ್ಯದಿಂದ ದೈವ ವಂಚಿತನಾದ ನಾನು ನನ್ನ ತಾಯಿ, ತಾಯಿಯ ತಾಯಿ–ಗೋದೂಬಾಯಿ, ಆಕೆಯ ತಾಯಿ ಇವರ ಪ್ರತ್ಯಕ್ಷ ಚಾರಿತ್ರ್ಯದಲ್ಲಿ ಪೌರುಷವನ್ನು ಕಂಡೆ" ಎಂದಿದ್ದಾರೆ. ತಾಯಿ ಅಂಬಿಕೆಯ ಮಾತೃತ್ವವನ್ನು ಅನುಭಾವಿಕ ನೆಲೆಯಿಂದ ನೋಡುತ್ತಾರೆ. "ನನ್ನ ಜೀವನದಲ್ಲಿ ಅಜ್ಜಿ ಗೋದೂಬಾಯಿ, ತಾಯಿ ಪಾರ್ವತಿ ಇವರ ಕನಸು, ಶ್ರೇಷ್ಠ ಗುರುಪರಂಪರೆಯ ಕಲೆ, ಮಾತೃಭಾವ ಶಕ್ತಿ ಕಾರ್ಯಪ್ರವೃತ್ತವಾಗಿ ಭಗವಂತನ ಲೀಲೆಯ ಸಾಕ್ಷಾತ್ಕಾರವನ್ನು ಮೂಡಿಸಿವೆ"[೧೨] ಎಂದು ಭಾವಿಸುತ್ತಾರೆ. ಹೀಗೆ ಚಿಕ್ಕಂದಿನಲ್ಲೇ ತಂದೆಯನ್ನು ಕಳೆದುಕೊಂಡು ಅವ್ಯಕ್ತವಾದ ಅಭದ್ರತೆಯ ಭಾವನೆಯಿಂದ ನರಳುತ್ತಿದ್ದ ಬೇಂದ್ರೆಯವರ ಮನಸ್ಸು, ಅಜ್ಜಿ ಮತ್ತು ತಾಯಿಯರ ವಾತ್ಸಲ್ಯದ ಆರೈಕೆಯಲ್ಲಿ ಮಾತೃತ್ವದ ಆಲಂಬನಾ ಭಾವದಿಂದ ಉದ್ದೀಪ್ತಗೊಳ್ಳತೊಡಗಿತ್ತು. ಅಜ್ಜಿ–ತಾಯಿಯರೇ ಬೇಂದ್ರೆಯವರಿಗೆ ಸರ್ವಸ್ವವಾಗಿ, ಅವರಿಂದ ಕಡು ಬಡತನದಲ್ಲಿಯೂ ಬೆಣ್ಣೆ ಮುದ್ದೆಯನ್ನು ಸವಿಯುವ ವಾತ್ಸಲ್ಯ ದಕ್ಕಿತ್ತು. ಬೇಂದ್ರೆಯವರ ಅಜ್ಜಿ ತಾಯಿಯರಿಗಾದರೋ ಬೇಂದ್ರೆಯವರಿಂದಲೇ ಬದುಕಿನ ಅರ್ಥ ಮತ್ತು ಸಾರ್ಥಕ್ಯ. ಹದಿನೇಳು ಮಕ್ಕಳಲ್ಲಿ ಎಲ್ಲರನ್ನೂ ಕಳೆದುಕೊಂಡು ಉಳಿದ ಒಬ್ಬಳೇ ಮಗಳಾದ ಅಂಬಿಕೆಯಲ್ಲಿ ಗಂಡು ಮಗುವನ್ನು ಕಾಣುವ ಅಜ್ಜಿಯ ಹಂಬಲ ಈಡೇರಿದ್ದು ಬೇಂದ್ರೆಯವರಲ್ಲಿ. ಚಿಕ್ಕ ವಯಸ್ಸಿನಲ್ಲಿಯೇ ಗಂಡನನ್ನು ಕಳೆದುಕೊಂಡು ದತ್ತಾತ್ರೇಯನ ಅನುಗ್ರಹದಿಂದ ಪಡೆದ ಬೇಂದ್ರೆಯವರೇ ತಾಯಿ ಅಂಬಿಕೆಯ ಬದುಕಿನ ಏಕೈಕ ಆಧಾರ. ಈ ಬಗೆಯ 'ತ್ರಿವಳಿ ಬಾಂಧವ್ಯ'ದ ಕೋಟೆಯಲ್ಲಿ ಮೂವರು ಬಂಧಿತರಾಗಿದ್ದರು.

ತಾಯಿ ಅಂಬಿಕೆಯ ವಾತ್ಸಲ್ಯವೇ ಬೇಂದ್ರೆಯವರ ಜೀವನದ ಸರ್ವಸ್ವವಾಗಿ, ಆ ಮೂಲಕ ಆವಿರ್ಭವಿಸಿದ ಮಾತೃತ್ವದ ಸಂಸ್ಪರ್ಶವೇ ಅವರ ಕಾವ್ಯಧಾರೆಯ ಮೂಲಸೆಲೆಯಾಯಿತು."ನಮ್ಮ ಅಜ್ಜಿಗೆ ನಮ್ಮ ತಾಯಿ, ನಮ್ಮ ತಾಯಿಗೆ ನಮ್ಮ ಅಜ್ಜಿ – ಎರಡು ಹೆಣ್ಣು ಜೀವಗಳು ಒಂದನ್ನೊಂದು ಅಂಟಿಕೊಂಡು ನಿಂತ ಪುಟ್ಟ ಕುಟುಂಬ ನಮ್ಮದು".[೧೩] ಎಂದು ಬೇಂದ್ರೆ ಹೇಳುತ್ತಾರೆ. ಬೇಂದ್ರೆಯವರೇ ಪ್ರತ್ಯಕ್ಷ ಕಂಡ ತಾಯಿ–ಅಜ್ಜಿಯರು ತಮಗಾಗಿ ಮತ್ತು ಸಂಸಾರಕ್ಕಾಗಿ ಅನುಭವಿಸಿದ ಕಷ್ಟ, ಬವಣೆ, ಕೂಡಿ ನಡೆಸಿದ ಜೀವನದ ಹೋರಾಟವು ಅವರಲ್ಲೊಂದು ಛಲ, ಧೈರ್ಯ, ಆತ್ಮ ವಿಶ್ವಾಸವನ್ನು ನಿರ್ಮಾಣ ಮಾಡಿತು. ಜೊತೆಗೆ ತಾಯಿ ಮತ್ತು ಅಜ್ಜಿಯ ಸಾನಿಧ್ಯ ಸಂಪರ್ಕದಲ್ಲಿ ಅವರಿಗೆ ಸ್ತ್ರೀ ಮನಸ್ಸು ಮತ್ತು ಭಾವನೆಗಳನ್ನು ಅರಿಯುವ ಶಕ್ತಿ, ಮಾತೃಭಕ್ತಿ, ಅತ್ಯಧಿಕವಾದ ಮಾತೃ ಪ್ರೀತಿಯ ಭಾವಗಳು ಸಿದ್ಧಿಸಿದವು. ಅಲ್ಲಿಂದಲೇ ಬೇಂದ್ರೆಯವರ ಹೃದಯದ ಪುಷ್ಟ ಭೂಮಿಕೆಯಲ್ಲಿ ಮಾತೃತ್ವದ ಆರಾಧನಾ ಬೀಜ ಮೊಳಕೆಯೊಡೆದು, ಅದು ಮುಂದೆ ಅವರ ಸಂಪೂರ್ಣ ಕಾವ್ಯವನ್ನು ಆಚ್ಛಾದಿಸಿತು. ಬಡತನ, ನೋವು, ಮಾತೃಪ್ರೇಮದಿಂದ ಪರಿಪಾಕಗೊಂಡ ಕಾವ್ಯಭೂಮಿಕೆಗೆ, ತಾಯಿತತ್ತ್ವಕ್ಕೆ , ತ'ಮ್ಮನ್ನು ತಮ್ಮ ಕಾವ್ಯಪ್ರತಿಭೆಯನ್ನು ಸಂಪೂರ್ಣವಾಗಿ ಸಮರ್ಪಿಸಿಕೊಂಡರು.

ಒಟ್ಟಾರೆ ಬೇಂದ್ರೆಯವರ ಕೌಟುಂಬಿಕ ಪರಿಸರವು ಅವರನ್ನು ಒಂದು ಸುಸಂಸ್ಕೃತ ಕವಿ ಪ್ರತಿಭೆಯಾಗಿ ರೂಪಿಸುವಲ್ಲಿ ಅತ್ಯಂತ ಪ್ರಮುಖ ಪಾತ್ರವನ್ನು ವಹಿಸಿತು. ಅದರಲ್ಲೂ ಬೇಂದ್ರೆಯವರ ಕಾವ್ಯದ ಮೂಲ ಸೆಲೆಯಾದ ಮಾತೃತ್ವದ ಪರಿಕಲ್ಪನೆಯು ಬೆಳೆದು ಬರಲು, ರೂಪುಗೊಳ್ಳಲು ಕಾರಣವಾಯಿತು. ಸುಷುಪ್ತಾವಸ್ಥೆಯ ಬೇಂದ್ರೆ ಹೃದಯದ ಮಾತೃ ಪ್ರೇಮ, ಅವರ ಸಾಹಿತ್ಯದ ಅಚ್ಚಿನಲ್ಲಿ ಮೂರ್ತಗೊಂಡು 'ತಾಯಿತತ್ತ್ವ'ದ ಅನಾವರಣವು ಬೇಂದ್ರೆಯವರಿಗೆ ಸಾಧ್ಯವಾಯಿತು.

## ಅಡಿಟಿಪ್ಪಣಿಗಳು

೧. ಪುಟ ಬಂಗಾರ, ಸಂಪುಟ–೫, ಶ್ರಾವಣ ಪ್ರತಿಭೆ, ಸಂ.ಜಿ.ಬಿ.ಜೋಶಿ ಮತ್ತು ಕೆ.ಡಿ.ಕುರ್ತಕೋಟಿ – ಪುಟ–೪೧೧
೨. ಸಾಹಿತ್ಯದ ವಿರಾಟ್ ಸ್ವರೂಪ – ಪುಟ–೪೧
೩. ಬೇಂದ್ರೆ ಆತ್ಮಕಥನ ಪುಟ–೪೯೦
೪. ಅವರ "ಗೆಳೆಯ ಬೇಂದ್ರೆ" ಎಂಬ ಪುಸ್ತಕದಲ್ಲಿ, ಪುಟ–೧೧
೫. ಬೇಂದ್ರೆ ಆತ್ಮಕಥನ ಪುಟ ೪೯೯
೬. ಬೇಂದ್ರೆ ಜೀವನ ಪರಿಚಯ – ವಾಮನ ಬೇಂದ್ರೆ ಪುಟ – ೯
೭. ಬೇಂದ್ರೆ ಆತ್ಮಕಥನ ಪು–೪೩೦
೮. ದತ್ತ ಸಾಹಿತ್ಯ–ಸಿಂಪಿ ಲಿಂಗಣ್ಣ – ಪು– ೩
೯. ಬಾರೋ ಸಾಧನಕೇರಿಗೆ" – ಕೀರ್ತಿನಾಥ ಕುರ್ತಕೋಟಿ. ಪುಟ–೭
೧೦. ಕೀರ್ತಿನಾಥಕುರ್ತಕೋಟಿ ಪುಟಬಂಗಾರ ಸಂ –೫
೧೧. ಬೇಂದ್ರೆ ಜೀವನ ಪರಿಚಯ – ಸಂ. ವಾಮನ ಬೇಂದ್ರೆ, ಪುಟ–೪೩.
೧೨. ಸಾಹಿತ್ಯದ ವಿರಾಟ್ ಸ್ವರೂಪ, ಪುಟ ೫೩
೧೩. ಸಾಹಿತ್ಯ ವಿರಾಟ್ ಸ್ವರೂಪ, ದ.ರಾ.ಬೇಂದ್ರೆ – ಪು–೮೨